ಓ.ಎಸ್.ನಂಃ 74/2023

ಪಿಡಬ್ಲ್ಯೂ-1

**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 18.11.2025 ರಂದು ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದಃ**

ನನ್ನ ತಂದೆ ಕಿಡ್ನಿ ವೈಪಲ್ಯದಿಂದ ಮೈಸೂರಿನ ಜೆ.ಎಸ್.ಎಸ್. ಆಸ್ಪತ್ರೆಯಲ್ಲಿ ಮೃತ ಹೊಂದಿರುತ್ತಾರೆ. ನನ್ನ ತಂದೆಯ ಮರಣ ಪ್ರಮಾಣ ಪತ್ರ ಪಡೆದಿದ್ದೇನೆ ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. 2003 ರಲ್ಲಿ ನನ್ನ ತಂದೆ ಮೃತ ಹೊಂದಿರುತ್ತಾರೆ. ಆದರೆ ದಿನಾಂಕ ನೆನಪಿಲ್ಲ. 3ನೇ ಪ್ರತಿವಾದಿ ನನ್ನ ಚಿಕ್ಕಪ್ಪ. ದೊಡ್ಡಮಾದಯ್ಯ ರವರ ಮಗ ಪರಮೇಶ್ವರ್ 9ನೇ ತರಗತಿ ಓದುತ್ತಿದ್ದಾಗ ಮೃತ ಹೊಂದಿದರು ಎಂದರೆ ಸರಿಯಲ್ಲ. ಸದರಿ ಪರಮೇಶ್ವರ್ ರವರಿಗೆ ಮದುವೆಯಾಗಿ ಮಕ್ಕಳಿರಲಿಲ್ಲ ಎಂದರೆ ಸಾಕ್ಷಿ ನಾನೇ ಅವರ ಮಗ ಎಂದು ನುಡಿಯುತ್ತಾರೆ. ಕುಳ್ಳಮ್ಮನ ಮಗ ಮುದ್ದುಮಾದಯ್ಯ ನನ್ನ ಚಿಕ್ಕ ತಾತ. ಕುಳ್ಳಮ್ಮನ ಗಂಡನ ಹೆಸರು ಕಾಳಯ್ಯ. ಕಾಳಯ್ಯ ಮೃತ ಹೊಂದಿದ ನಂತರ ಮುದ್ದುಮಾದಯ್ಯ ಕುಂಟಯ್ಯರವರಿಗೆ ಜನಿಸಿರುತ್ತಾರೆ ಎಂದರೆ ಸರಿಯಲ್ಲ. ಕುಂಟಯ್ಯನ ಮಗ ಮುದ್ದುಮಾದಯ್ಯರವರಿಗೆ ದಾವ ಸ್ವತ್ತಿನ ಮೇಲೆ ಯಾವುದೆ ಹಕ್ಕು ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮುದ್ದುಮಾದಯ್ಯ ಕೆಬ್ಬೆಪುರ ಗ್ರಾಮದ ಸಿದ್ದಯ್ಯ ಎಂಬುವವರ ಮನೆಗೆ ದತ್ತು ಮಗನಾಗಿ ಹೋದರು ಎಂದರೆ ಸಾಕ್ಷಿ ಆ ಗ್ರಾಮಕ್ಕೆ ಹೋದರು ಎಂದು ನುಡಿಯುತ್ತಾರೆ. ಆದರೆ ಯಾರ ಮನೆಯಲ್ಲಿ ಇದ್ದರು ಎಂದು ನನಗೆ ಗೊತ್ತಿಲ್ಲ. ವಾದಿ ನನ್ನ ದೊಡ್ಡಪ್ಪ ಮಲಿಯಯ್ಯನವರ ಹೆಂಡತಿ. ನನ್ನ ದೊಡ್ಡಪ್ಪ ಮಲಿಯಯ್ಯರವರಿಗೆ ದೇವಮ್ಮ ಎಂಬ ಹೆಂಡತಿ ಇದ್ದು ವಾದಿ ಆತನ ಹೆಂಡತಿ ಎಂದರೆ ಸರಿಯಲ್ಲ. ನನ್ನ ತಾಯಿ, ನಾನು ಮತ್ತು ವಾದಿ ಒಂದೇ ಮನೆಯಲ್ಲಿ ಇದ್ದೇವೆ. ನಾನು ಹುಟ್ಟಿದ ದಿನದಿಂದ ನಾನೇ ವಾದಿಯ ಯೋಗಕ್ಷೇಮ ನೋಡಿಕೊಂಡು ಬರುತ್ತಿದ್ದೇನೆ. ನನ್ನ ಬಳಿ ಪಡಿತರ ಚೀಟಿ ಇದೆ. ಸದರಿ ಪಡಿತರ ಚೀಟಿಯಲ್ಲಿ ನನ್ನ ಹೆಸರು, ನನ್ನ ತಂದೆ ತಾಯಿಯ ಹೆಸರು ಮತ್ತು ನನ್ನ ತಮ್ಮನ ಹೆಸರು ದಾಖಲಿದೆ. ಅದನ್ನು ಹಾಜರುಪಡಿಸಬಲ್ಲೆ. ನಾನು ಪದವಿಯನ್ನು ಪೂರ್ಣವಾಗಿ ಮುಗಿಸಿಲ್ಲ. ನನ್ನ ಶಾಲಾ ದಾಖಲೆಗಳಲ್ಲಿ ನನ್ನ ತಂದೆ ಹೆಸರು ಪರಮೇಶ್ವರಯ್ಯ ಎಂದು ನಮೂದು ಇದೆ. ಸದರಿ ದಾಖಲೆಗಳನ್ನು ಹಾಜರುಪಡಿಸಬಲ್ಲೆ.

ವಾದಿ ಮಂಗಲ ಗ್ರಾಮದಲ್ಲಿ ವಾಸ ಮಾಡುತ್ತಿದ್ದಾರೆ. ವಾದಿ ದಾವ ಸ್ವತ್ತಿನ ಜಮೀನಿನಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಐಟಂ ನಂ.1 ಈಗ ವಾದಿ ಹೆಸರಿನಲ್ಲಿ ಇದೆ. ವಾದಿ ಹೆಸರಿಗೆ ಖಾತಾ ವಾಗುವ ಮುನ್ನಾ ಅದು ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅದು ಮೊದಲು ಮಲಯಯ್ಯರವರ ಹೆಸರನಲ್ಲಿ ಇತ್ತು ಎಂದು ನುಡಿಯುತ್ತಾರೆ. ಐಟಂ ನಂ.2 ವಾದಿಯ ಹೆಸರಿಗೆ ಪೌತಿ ಖಾತೆಯಾಗಿದೆ. ಐಟಂ ನಂ.2 ಕ್ಕೆ ನಮ್ಮ ಗ್ರಾಮದ ಓಣಿ ಕಡೆಯಿಂದ ರಸ್ತೆ ಇದೆ. 1 ಕ್ಕೆ ಗೋಪಾಲಸ್ವಾಮಿ ಬೆಟ್ಟದ ಮುಖ್ಯ ರಸ್ತೆಗೆ ಹೊಂದಿಕೊಂಡಿದೆ. ಮಲಿಯಯ್ಯ ವಾದಿಯ ಗಂಡ ಅಲ್ಲ ಎಂದರೆ ಸರಿಯಲ್ಲ. ಆತನಿಗೆ ದೇವಮ್ಮ ಎಂಬುವವರು ಮಾತ್ರ ಹೆಂಡತಿಯಾಗಿದ್ದರು ಎಂದರೆ ಸರಿಯಲ್ಲ. ಪರಮೇಶ್ವರ್ ಚಿಕ್ಕ ವಯಸ್ಸಿನಲ್ಲೆ ಅವಿವಾಹಿತನಾಗಿ ಮೃತ ಹೊಂದಿದ್ದು ನಾನು ಆತನ ಮಗನಲ್ಲ ಎಂದರೆ ಸರಿಯಲ್ಲ. ಪರಮೇಶ್ವರ್ ನನ್ನ ತಂದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ದಾವ ಸ್ವತ್ತನ್ನು ಕಬಳಿಸುವ ಸಲುವಾಗಿ ಸುಳ್ಳು ಸಂಬಂಧ ಕಲ್ಪಿಸಿ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

**ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ, ಸಮಯ ನೀಡಿ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ